509-2

**File No.ENERGY/376/VSC/2020-JD-ENERGY SECRETARIAT**

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: Pradhan Mantri-Kisan Urja Suraksha Evam Uttan Mahabhiyan (PM-KUSUM) ಯೋಜನೆಯ Component-A ಯಡಿ ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಅನುಮೋದನೆಯಾಗಿರುವ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ನಿವಾರಿಸಲು ರಾಜ್ಯ ಮಟ್ಟದ ಸಮಿತಿ ರಚಿಸುವ ಕುರಿತು.

ಓದಲಾಗಿದೆ:

1. ವಿಜ್ಞಾನಿಗಳು-ಇ, ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ (ಎಂ.ಎನ್.ಆರ್.ಇ) ರವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:32/645/2017-SPV Division ದಿನಾಂಕ:22.07.2019.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕ್ರೆಡಲ್) ರವರ ಪತ್ರ ಸಂಖ್ಯೆ:ಕೆ.ಆರ್.ಇ.ಡಿ.ಎಲ್/07/ಎಸ್.ಪಿ./768/2020/2491 ದಿನಾಂಕ:18.06.2020.

ನವೀಕರಿಸಬಹುದಾದ ಇಂಧನ ಅಭಿವೃದ್ಧಿ ... ಬೆಂಗಳೂರು
ಸಂ. 1201
ದಿನಾಂಕ 15.7.2020

--------

**ಪ್ರಸ್ತಾವನೆ:**

ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಶಕ್ತಿಯ ಸ್ಥಾಪಿತ ಸಾಮರ್ಥ್ಯದ ಪಾಲನ್ನು 2030 ರ ವೇಳೆಗೆ 40% ಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ವರ್ಷ 2022ಕ್ಕೆ ಸೌರ ಯೋಜನೆಗಳ ಗುರಿಯನ್ನು 20,000 ಮೆಗಾ ವ್ಯಾಟ್ ನಿಂದ 1,00,000 ಮೆಗಾ ವ್ಯಾಟ್ ಗೆ ಹೆಚ್ಚಿಸಿ ಆದೇಶಿಸಿದೆ.

ಸದರಿ ಗುರಿಯನ್ನು ತಲುಪಲು ಅನುವಾಗುವಂತೆ ಮೆಗಾ ವ್ಯಾಟ್ ಆಧಾರಿತ ಯೋಜನೆಗಳ ಜೊತೆಗೆ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಹಾಲಿ ಇರುವ ಡಿಸೇಲ್ ಪಂಪ್ ಸೆಟ್‌ಗಳನ್ನು ಸೌರ ಪಂಪ್‌ಸೆಟ್‌ಗಳಿಂದ ಬದಲಾಯಿಸಲು ಮತ್ತು ಗ್ರಿಡ್ ಸಂಪರ್ಕಿತ ಸೌರ ಪಂಪ್‌ಸೆಟ್ ಗಳನ್ನು ಅಳವಡಿಸಲು ಕೇಂದ್ರ ಸರ್ಕಾರದಿಂದ ಮೇಲೆ ಓದಲಾದ (1) ರಂತೆ PM-KUSUM ಯೋಜನೆಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಸದರಿ ಯೋಜನೆಯಡಿ ರಾಜ್ಯ ಸರ್ಕಾರವು ಪಾಲ್ಗೊಳ್ಳುತ್ತಿದ್ದು, ಸದರಿ ಯೋಜನೆಯ Component-A: Setting up of 10,000 MW of Decentralized Ground/Stlit Mounted Grid Connected Solar or other Renewable Energy based Power plants ರಡಿ ವರ್ಷ 2019-20ಕ್ಕೆ ರಾಜ್ಯಕ್ಕೆ 50 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳು ಹಂಚಿಕೆಯಾಗಿದ್ದು, 2020-21ನೇ ಸಾಲಿಗೆ ಯೋಜನೆಗಳು ಹಂಚಿಕೆಯಾಗಲು ಬಾಕಿ ಇವೆ.

To-SG 6/8



768

PM-KUSUM ಯೋಜನೆಯ Component-A ಯಡಿ ರಾಜ್ಯದ ನೇಮಿತ ಸಂಸ್ಥೆಯ ಜವಾಬ್ದಾರಿಗಳ ಕುರಿತು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ:

"B (iii) State Nodal Agency (SNA):

State Nodal Agency (SNA) will coordinate with States/UTs, DISCOMs and farmers for implementation of the scheme. They will assist the farmers in project development activities including formulation of DPR, PPA/EPC contracts, getting funds from financial institutions, etc. For settlement of any issues arising during selection of solar/other renewable energy based power plants and their implementation, a State level Committee under the chairmanship of Principal Secretary (Renewable Energy/Energy) will be setup by the participating State/UT and SNA of that State will be responsible to coordinate/organize the quarterly meetings of the State Level Committee.

ಅದರಂತೆ, ಯೋಜನೆಗಳು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಅನುವಾಗುವಂತೆ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸಲು ರಾಜ್ಯ ಮಟ್ಟದಲ್ಲಿ ಸಮಿತಿಯನ್ನು ರಚಿಸಿ, ಈ ಸಂಬಂಧ ರಾಜ್ಯದ ನೇಮಿತ ಸಂಸ್ಥೆಯು ತ್ರೈಮಾಸಿಕವಾರು ಸಭೆಯನ್ನು ಆಯೋಜಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರು ಮೇಲೆ ಓದಲಾದ (2) ರಲ್ಲಿ ರಾಜ್ಯ ಮಟ್ಟದ ಸಮಿತಿ ರಚಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ENERGY/376/VSC/2020-JD-ENERGY SECRETARIAT,</u>**

**<u>ಬೆಂಗಳೂರು, ದಿನಾಂಕ:07.07.2020</u>**

Pradhan Mantri-Kisan Urja Suraksha Evam Uttan Mahabhiyan (PM-KUSUM) ಯೋಜನೆಯ Component-A ಯಡಿ ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ಅನುಮೋದನೆಯಾಗಿರುವ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ನಿವಾರಿಸಲು ಮತ್ತು ನಿಗದಿತ ಅವಧಿಯೊಳಗೆ

ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಿದೆ.

| | | |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ | ಅಧ್ಯಕ್ಷರು |
| 2 | ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ | ಸದಸ್ಯರು |
| 4 | ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ | ಸದಸ್ಯರು |
| 5 | ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ | ಸದಸ್ಯರು |
| 6 | ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್ | ಸದಸ್ಯರು |
| 7 | ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ | ಸದಸ್ಯರು |
| 8 | ನಿರ್ದೇಶಕರು(ತಾಂತ್ರಿಕ), ಬೆಸ್ಕಾಂ | ಸದಸ್ಯರು |
| 9 | ನಿರ್ದೇಶಕರು(ತಾಂತ್ರಿಕ), ಜೆಸ್ಕಾಂ | ಸದಸ್ಯರು |
| 10 | ನಿರ್ದೇಶಕರು(ತಾಂತ್ರಿಕ), ಹೆಸ್ಕಾಂ | ಸದಸ್ಯರು |
| 11 | ನಿರ್ದೇಶಕರು(ತಾಂತ್ರಿಕ), ಮೆಸ್ಕಾಂ | ಸದಸ್ಯರು |
| 12 | ನಿರ್ದೇಶಕರು(ತಾಂತ್ರಿಕ), ಸೆಸ್ಕ್ | ಸದಸ್ಯರು |
| 13 | ಸರ್ಕಾರದ ಉಪ ಕಾರ್ಯದರ್ಶಿಗಳು, ಇಂಧನ ಇಲಾಖೆ | ಸದಸ್ಯರು |
| 14 | ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕ್ರೆಡಲ್ | ಸಂಚಾಲಕರು |
| 15 | ಜಂಟಿ ನಿರ್ದೇಶಕರು(ಎನ್ ಸಿಇ), ಇಂಧನ ಇಲಾಖೆ | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

N. mangalagowri 8/7/2020

(ಎನ್.ಮಂಗಳಗೌರಿ)

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)

ಇಂಧನ ಇಲಾಖೆ

7/7/2020

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿಗಳು:-

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ ಜೆಸ್ಕಾಂ/ಸೆಸ್ಕ್/ಕ್ರೆಡಲ್.

2. ನಿರ್ದೇಶಕರು(ತಾಂತ್ರಿಕ), ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ ಜೆಸ್ಕಾಂ/ಸೆಸ್ಕ್.
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.
4. ಸನ್ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಅಪರ ನಿರ್ದೇಶಕರು(ಆರ್ಥಿಕ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಅಪರ ನಿರ್ದೇಶಕರು(ತಾಂತ್ರಿಕ), ಅಪರ ನಿರ್ದೇಶಕರು(ಆರ್ಥಿಕ), ಜಂಟಿ ನಿರ್ದೇಶಕರು (ಯೋಜನೆ) ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.